ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 57-60
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪ್ರಗತಿಶೀಲ ಪಂಥದ ಸಂದರ್ಭದಲ್ಲಿ ಶಿಕ್ಷಣದ ಮೂಲಕ ಸಾಮಾಜಿಕ ಪಲ್ಲಟ

**ಡಾ. ಕರಿಯಣ್ಣ ಎಸ್**

ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ, ಸಿಂಧಿ ಕಾಲೇಜು, ಕೆಂಪಾಪುರ, ಬೆಂಗಳೂರು.

***Abstract:***

*ಭಾರತೀಯವ ವ್ಯವಸ್ಥೆಯಲ್ಲಿ ಪರಂಪರೆಯಿಂದಲೂ ನಡೆದುಕೊಂಡು ಬಂದಿರುವ ಹೀನ ವ್ಯವಸ್ಥೆಯೆಂದರೆ ಮೇಲು ಕೀಳಿನದು ಈ ಮೇಲು ಕೀಳು ಕಲ್ಪನೆಗಳ ಉಗಮಕ್ಕೆ ಮೂಲಭೂತವಾಗಿ ಜಾತಿಯೇ ಕಾರಣ. ಸಾಮಾಜಿಕವಾಗಿ ಶುರುವಾದ ಈ ಪ್ರಕ್ರಿಯೆ ಕ್ರಮೇಣ ಉಳಿದ ಕ್ಷೇತ್ರಗಳಿಗೂ ಹರಡುತ್ತಾ ಬಂದು ಇಂದು ಬೃಹದಕಾರವಾಗಿ ಬೆಳೆದು ನಿಂತಿದೆ. ಜಾತಿ, ಶೋಷಣೆಯ ಅಸ್ತ್ರವೂ ಹೌದು ಹಾಗೆಯೇ ಶೋಷಣೆಯ ಕೇಂದ್ರವೋ ಹೌದು, ಶೋಷಿಸುವವರಿಗೆ ಜಾತಿಯೇ ಪ್ರಬಲ ಮಾಧ್ಯಮ. ಹಾಗೆಯೇ ಶೋಷಣೆಗೊಳಗಾದವರಿಗೆ ಅದು ಸಂಕಟವೂ ಹೌದು. ಪ್ರಸ್ತುತ ಲೇಖನದಲ್ಲಿ ಪ್ರಗತಿಶೀಲ ಪಂಥದ ಸಂದರ್ಭದಲ್ಲಿ ಶಿಕ್ಷಣದ ಮೂಲಕ ಸಾಮಾಜಿಕ ಪಲ್ಲಟ ಕುರಿತು ಚರ್ಚಿಸಲಾಗಿದೆ.*

***Keywords:*** *ಜಾತಿವ್ಯವಸ್ಥೆ, ಶೋಷಣೆ, ಪ್ರಗತಿಶೀಲ ಪಂಥ, ಶಿಕ್ಷಣ, ಸಾಮಾಜಿಕ ಪಲ್ಲಟ.*

## ಪೀಠಿಕೆ

ಮನುಷ್ಯರ ನಡುವೆ ಮುಟ್ಟುವ – ಮುಟ್ಟದಿರುವ ಎರಡು ರೀತಿಯ ಕ್ರಿಯೆಗಳು ನಡೆಯುತ್ತವೆ. ಪರಂಪರೆಯಿಂದ ಅನುಚೂನವಾಗಿ ಕಾಪಾಡಿಕೊಂಡು ಬಂದಿರುವ ಕುಲ ಕಸುಬುಗಳು ಇದಕ್ಕೆ ಸಾಕಷ್ಟು ನೀರೆರೆದು ಪೋಷಿಸುತ್ತಿವೆ. ಜಾತಿಯಿಂದ ಮೇಲಿರುವ ಬ್ರಾಹ್ಮಣ ಎಲ್ಲಾ ಸಮುದಾಯಗಳಿಗೂ ಪೂಜ್ಯನಾಗಿ ಶೋಷಣೆಯ ಆರಂಭದ ಪಾಲುದಾರನಾದ, ಸಾಮಾಜಿಕ ನೀತಿನಿಯಮಗಳ ಒಡೆಯನಾದ. ಹೀಗೆ ಸಾಮಾಜಿಕ ಏಕಸ್ವಾಮ್ಯ ಸಿಕ್ಕಿದ್ದೇ, ನೀತಿ ನಿಯಮಗಳ ಅಮಾನವೀಯತೆಯನ್ನು ಬೋಧಿಸುವುದಕ್ಕೆ ಪ್ರಬಲ ಕಾರಣವಾಯಿತು. ಸೇವಕನಾದ ಶೂದ್ರ ತೀರಾ ಕರುಣಾಜನಕ ಸ್ಥಿತಿಗಿಳಿದ. ಶೋಷಿತ–ಶೋಷಕರ ಪಡೆ ಅನಿವಾರ್ಯ ಅನ್ನುವ ರೀತಿಯಲ್ಲಿ ಅಸ್ತಿತ್ವ ಪಡೆಯಿತು. ಸ್ಥೂಲವಾಗಿ ಇದನ್ನು ಗಮನಿಸಿದಾಗ, ಎರಡು ಅಂಶಗಳು ಗಮನ ಸೆಳೆಯುತ್ತವೆ.

ಸೂಕ್ಷ್ಮವಾಗಿ ಗಮನಿಸಿದಾಗ "ಸಾಂಪ್ರದಾಯಿಕವಾಗಿ ದತ್ತವಾದದು ಕಸುಬಿನಿಂದ ಬಂದ ಜಾತಿ ಅಥವಾ ಜಾತಿಯಿಂದ ಬಂದ ಕಸುಬು ಇದನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕಾಗಿತ್ತು. ಇನ್ನೊಂದು ಜಾತಿಯ ಕಾರಣವಾಗಿ ಮುಂದುವರೆದ ಶೋಷಣೆಯ ವಲಯ ಬದುಕುವ ಯಾವ ಘಟ್ಟದಲ್ಲೂ ಎಲ್ಲರೂ ಸಮಾನರಲ್ಲ ಎಂಬುದನ್ನು ಮನವರಿಕೆಯಾಗಿಸಿತು, ನಡೆದಾಡುವ ದಾರಿಯಿಂದ ಹಿಡಿದು ಜೀವಜಲದವರೆಗೆ ಈ ಅಸಮಾನತೆ ಕ್ರೂರವಾಯಿತು. ಮಡಿ ಮೈಲಿಗೆಗಳು ಉತ್ಪನ್ನವಾದವು"[1] ಈ ಮಾತಿನಲ್ಲಿಯೂ ಶೋಷಣೆಯ ಪರಂಪರೆಯನ್ನು ಕುರಿತಂತೆ

***Please cite this article as:*** ಕರಿಯಣ್ಣ. ಎಸ್. (2024). ಪ್ರಗತಿಶೀಲ ಪಂಥದ ಸಂದರ್ಭದಲ್ಲಿ ಶಿಕ್ಷಣದ ಮೂಲಕ ಸಾಮಾಜಿಕ ಪಲ್ಲಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 57–60

ವಿವರಣೆಯಿದೆ. ಇಂಥ ಶೋಷಣೆಯ ಸಮಾಜದ ವಿರುದ್ಧ ಕಟ್ಟೀಮನಿ ಮತ್ತು ನಿರಂಜನರ ಪ್ರತಿಕ್ರಿಯೆ ವಿಶಿಷ್ಟವಾದುದಾಗಿದೆ. "ಅಂದಂದಿನ ಸಾಹಿತ್ಯವು ಎಷ್ಟೆಷ್ಟರ ಮಟ್ಟಿಗೆ ತನ್ನ ಸುತ್ತಣ ಸಮಾಜದೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳತೊಡಗಿದೆಯೋ ಅಷ್ಟಷ್ಟರಮಟ್ಟಿಗೆ ಅಂದಂದಿನ ಸಾಹಿತ್ಯದಲ್ಲಿ ಅದರ ಸಾಮಾಜಿಕ ಕಾಳಜಿಗಳನ್ನು ನಾವು ಗುರುತಿಸಬಹುದು. ಈ ದೃಷ್ಟಿಯಿಂದ ಇಡೀ ಕನ್ನಡ ಸಾಹಿತ್ಯವು ಚರಿತ್ರೆಯ ಸಾಮಾಜಿಕ ಪ್ರಜ್ಞೆ ಜಾಗೃತವಾಗುತ್ತ ಬಂದಿದ್ದರ ಚರಿತ್ರೆಯಾಗದೆ"[2]. ಈ ನಿಲುವನ್ನೆ ಕಟ್ಟೀಮನಿ ಮತ್ತು ನಿರಂಜನರು ಸಾಧಿಸುತ್ತಾ ಬಂದರು. ನೋಟವನ್ನೆ ಸಾಮಾಜಿಕ ಪ್ರಜ್ಞೆಯಾಗಿಸುತ್ತ ಸಾಗಿದರು. ತಾವೇ ಅನುಭವಿಸಿದ ಸಾಮಾಜಿಕ ಸಂಕಟಗಳನ್ನು ಅಭಿವ್ಯಕ್ತಿಸುತ್ತಲೇ ಕಂಡುಕೊಂಡ ಪರಿಹಾರದ ದಾರಿಯನ್ನು ಇಲ್ಲಿ ಗ್ರಹಿಸಲು ಪ್ರಯತ್ನಿಸಲಾಗಿದೆ.

ಭಾರತೀಯ ಸಂಪ್ರದಾಯ ಸಮಾಜ ಭಾವಿಸಿಕೊಂಡಂತೆ ಶಿಕ್ಷಣವನ್ನು ಕೆಳವರ್ಗದವರಿಗೆ ಕಲ್ಪಿಸಿದರೆ ನಮ್ಮನ್ನ ಪ್ರಶ್ನೆ ಮಾಡುವುದರೊಂದಿಗೆ ತಿರುಗಿ ಬೀಳುತ್ತಾರೆ ಎಂಬ ಭಯವಿತ್ತು. ಆ ಕಾರಣಕ್ಕೆ ಶಿಕ್ಷಣವನ್ನ ಕೇಂದ್ರೀಕರಣಗೊಳಿಸಿಕೊಂಡು ತಾವು ಬೆವರು ಸುರಿಸಿ ದುಡಿಯದಂತೆ, ಉಳಿದವರಷ್ಟೇ ದುಡಿಯುವಂತೆ ಶಾಸ್ತ್ರೋಕ್ತವಾದ ವಿಚಾರಗಳನ್ನು ಶಾಸನ ರೂಪದಲ್ಲಿ ಹುಟ್ಟುಹಾಕಿದರು. ಶ್ರಮಿಕ ವರ್ಗಗಳು ತಮ್ಮ ಸ್ವ–ಸಾಮರ್ಥ್ಯದಿಂದ ಶಿಕ್ಷಣವನ್ನು ಕಲಿತು ಇಂಥ ಮತೀಯ ಶಕ್ತಿಗಳ ಎದುರು ತಿರುಗಿ ಬೀಳುವುದಕ್ಕೆ ಮುಂಚಿತವಾಗಿಯೇ ಆರೋಪದಿಂದ ಅವುಗಳನ್ನು ದಮನಗೊಳಿಸಿದವು. ಶಂಭೂಕ, ಏಕಲವ್ಯ ದುರಂತ ಇದೇ ತರಹದ್ದು. ಮುಂದೆ ಈ ರೀತಿಯ ಪ್ರತಿರೋಧಗಳು ಹುಟ್ಟಿಕೊಳ್ಳದಂತೆ ಎಚ್ಚರ ವಹಿಸಲು ಹವಣಿಸಿದವು. ಆದರೆ ವಸಾಹತುಶಾಹಿಯ ಆಗಮನದಿಂದ ಭಾರತೀಯ ಇಂಥ ಸಾಮಾಜಿಕ ವ್ಯವಸ್ಥೆಯನ್ನು ಕದಡಿ ಶಿಕ್ಷಣದಿಂದ ಹೊಸಪ್ರಜ್ಞೆಯೊಂದು ಸಾರ್ವತ್ರಿಕಗೊಂಡಂತೆ ಚಿಗುರೊಡೆಯುವಂತಾಯಿತು. ಈ ನಿಟ್ಟಿನಲ್ಲಿ 'ಬ್ರಿಟಿಷರು ಭಾರತಕ್ಕೆ ಬಾರದೇಹೋಗಿದ್ದರೆ ನಾನು ಹಾರುವರ ಮನೆಯಲ್ಲಿ ಸಗಣಿ ಬಾಚಬೇಕಿತ್ತು' ಎಂಬ ಕುವೆಂಪುರವರ ಮಾತು ವಸಾಹತುಪೂರ್ವ ಭಾರತೀಯ ಸಾಮಾಜಿಕ ವ್ಯವಸ್ಥೆಗೆ ಕನ್ನಡಿ ಹಿಡಿದಂತಿದೆ. ಈ ವ್ಯವಸ್ಥೆಗೆ ಆಧುನಿಕ ಶಿಕ್ಷಣ ವ್ಯವಸ್ಥೆ ಭಾರತೀಯ ವ್ಯವಸ್ಥೆಯಲ್ಲಿ ಪಲ್ಲಟ ಉಂಟುಮಾಡಿತು. ಮೆಕಾಲೆ ಉದ್ದೇಶವೇನೆ ಇರಲಿ, ಭಾರತೀಯ ಸಮಾಜ ಪಡೆದುಕೊಂಡ ಹೊಸಜಿಗಿತ ಬಹಳ ಮುಖ್ಯವಾದದು. ಈ ಆಂಶವೇ ಮಹಾತ್ಮಜ್ಯೋತಿ ಬಾಪುಲೆಯವರಿಂದ ಹಿಡಿದು ಗಾಂಧೀಜಿಯವರೆಗೆ ಸಾಮಾಜಿಕ ಹೋರಾಟಕ್ಕೆ ಕಾರಣವಾಯಿತು.

ವ್ಯವಸ್ಥೆಯ ಜಾಡ್ಯವನ್ನು ತೊಡೆದು ಹೊಸ ಸಂರಚನೆಯೊಡನೆ ಹೊಸ ಸ್ಪೂರ್ತಿಯನ್ನು ತಂದುಕೊಟ್ಟವರು ಇವರು. ಬದುಕನ್ನು ಸಮಗ್ರವಾಗಿ ಸ್ಪಂದಿಸುವ ಇವರ ಚಿಂತನೆಗಳಲ್ಲಿ ಬಹಳ ಮುಖ್ಯವಾದುದೆಂದರೆ, 'ಅಕ್ಷರ'ದ ಸಾರ್ವತ್ರಿಕತೆ. ಇದರಿಂದ ಸಾವಿರಾರು ವರ್ಷಗಳಿಂದ ಅಕ್ಷರ ವಂಚಿತ ಸಮೂಹ ಸಾರ್ವಜನಿಕರ ಬದುಕಿನಲ್ಲಿ ಪ್ರವೇಶಿಸಲು ಸಾಧ್ಯಾವಾಯಿತು. ಈ ಕಾರಣಕ್ಕಾಗಿಯೇ ಅರವಿಂದರು ಶಿಕ್ಷಣದ ಸ್ವರೂಪವನ್ನು ಕುರಿತು ಹೇಳುವ ಮಾತು ಸಮಂಜಸವೆನಿಸುತ್ತದೆ, "ನೈಜವೂ ಜೀವಂತವೂ ಆದ ಶಿಕ್ಷಣವು ಮನುಷ್ಯನಿಗೆ ಮತ್ತು ಅವನ ವ್ಯಕ್ತಿನಿಷ್ಠತೆಗೆ ರಾಷ್ಟ್ರಕ್ಕೆ ಜನಾಂಗಕ್ಕೆ ಮತ್ತು ವಿಶ್ವ ಮಾನ್ಯತೆಗೆ ಮಹತ್ತರ ಸ್ಥಾನವನ್ನು ಕೊಡುತ್ತದೆ, ಇಂತಹ ಶಿಕ್ಷಣವು ವ್ಯಕ್ತಿಯಲ್ಲಿ ಹುದುಗಿರುವ ಮಾನವ ಜೀವನದ ಭಾವಲಹರಿಗಳನ್ನು ಬಡಿದೆಚ್ಚರಿಸುತ್ತದೆ. ಸಾಮೂಹಿಕ ಜೀವನದ ಅವಿಭಾಜ್ಯ ಭಾಗವಾದ ವ್ಯಕ್ತಿಗೆ ಈ ವಿಶ್ವಜೀವನದ ಮಹಾಮನಸ್ಸು, ಆತ್ಮವನ್ನು ಅರ್ಥವಿಸಿಕೊಳ್ಳಲು ಮಾರ್ಗ ಕಲ್ಪಿಸುತ್ತದೆ"[3] ಈ ಅಂಶ ಬ್ರಿಟಿಷ್ ಶಿಕ್ಷಣ ಪದ್ಧತಿಯ ಸ್ವರೂಪಕ್ಕೆ ಕೊಟ್ಟ ಪ್ರತಿಕ್ರಿಯೆ ಮಹಾತ್ತರವಾದುದೆ ಆಗಿದೆ. ಇಂಥ ಕ್ರಿಯೆ ಪ್ರತಿಕ್ರಿಯೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಸಾಹಿತ್ಯವೆಂಬುದು ಶಿಷ್ಟೀಕರಣದ ಪೊರೆಯನ್ನ ಕಳಚಿಕೊಂಡು ಜನಮುಖಿಯಾಗುತ್ತಿದ್ದು ಬದುಕಿನ

ಮಗ್ಗಲುಗಳನ್ನು ಹಿಡಿದಿಡುವ ಹವಣಿಕೆಯಲ್ಲಿತ್ತು ಸಮುದಾಯಗಳು ಕೂಡ ವಿಭಿನ್ನ ಮಗ್ಗಲಿಗೆ ಹೊರಳಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ನಿಲುವನ್ನು ತಾಳಿದವು. ಈ ಆಧುನಿಕ ಶಿಕ್ಷಣ, ಸಮುದಾಯಗಳಲ್ಲಿ ಉಂಟು ಮಾಡಿದ ಬದಲಾವಣೆಯನ್ನು ಮೂರು ನೆಲೆಯಲ್ಲಿ ಗುರುತಿಸಬಹುದು.

1. ಮೇಲ್ವರ್ಗದಲ್ಲಿ ಉಂಟಾದ ಸಮುದಾಯದ ಸಂಘಟನೆ ಮತ್ತು ವಿಘಟನೆ.
2. ಶೂದ್ರ ಸಮುದಾಯಗಳು ಮತ್ತು ಶ್ರಮಿಕ ಸಮುದಾಯಗಳು ಕಂಡುಕೊಂಡ ಹೊರಳು ದಾರಿ ಮತ್ತು ತಮ್ಮ ಹಿತದ ಮಾಧ್ಯಮವಾಗಿಸಿಕೊಂಡದ್ದು
3. ಕೆಳ ಸಮುದಾಯಗಳು ಕಂಡುಕೊಂಡ ಹೊರಳು ದಾರಿ.

ಈ ಮೂರು ನೆಲೆಗಳಲ್ಲಿ ಆಧುನಿಕ ಶಿಕ್ಷಣ ಉಂಟುಮಾಡಿದ ಪರಿಣಾಮವನ್ನು ಕುರಿತು ಈ ಸಂದರ್ಭದ ಸಾಹಿತ್ಯ ದಾಖಲಿಸುತ್ತದೆ. ಆಧುನಿಕ ಶಿಕ್ಷಣ ಯಾವಾಗ ಗೂಳಿಯಂತೆ ಒಂದು ಸಾಂಪ್ರದಾಯಿಕ ಭಾರತೀಯ ಸಾಂಸ್ಕೃತಿಕ ನಂಬಿಕೆಗಳಿಗೆ ಗುದ್ದಿದಾಗ ಹುಟ್ಟಿಕೊಂಡ ಈ ತಲ್ಲಣಗಳು ಒಂದು ಕಡೆ ಈ ಹೊಸ ಸಂವೇದನೆಗಳಿಗೆ ನೇರ ಮುಖಾಮುಖಿ ಮಾಡಿದರೆ ಕೆಲವೆಡೆ ರಕ್ಷಣಾತ್ಮಕ ನಿಲುವನ್ನು ತಳೆದುಬಿಟ್ಟವು. ಈ ಎರಡು ರೀತಿಯ ನಿಲುವಿಗೆ ಆ ಹೊತ್ತಿನ ವಾಸ್ತವ, ಪ್ರೇರಣೆಗಳು ಮತ್ತು ಪರಿಸರ ಮುಖ್ಯ ಕಾರಣವಾಗಿದ್ದವು.

ಗುಲ್ವಾಡಿ ವೆಂಟರಾವ್ ಅವರು ಬರೆಯುತ್ತಿದ್ದ ಕಾಲಕ್ಕೆ ರಾಷ್ಟ್ರದಾದ್ಯಾಂತ ಸುಧಾರಣಾ ಪರವಾಗಿ ಆಂದೋಲನಗಳು ಚುರುಕಾಗಿದ್ದವು. ಕ್ರಿಶ್ಚಿಯನ್ ಮತ ಪ್ರಚಾರಕ ಉದ್ದೇಶ ಪ್ರದಾನವಾಗಿದ್ದು ಅದರ ಆನುಷಂಗಿಕ ಫಲಗಳೆಂಬಂತೆ ಆಗುತ್ತಿದ್ದ ಸುಧಾರಣೆಗಳು, ಪರಿವರ್ತನೆಗಳು ಹಾಗು ಭಾರತದ ಬ್ರಿಟಿಷ್ ಸರ್ಕಾರವು ತನ್ನ ಆಡಳಿತ ವ್ಯವಸ್ಥೆಯ ಅಂಗವಾಗಿ ಕಾರ್ಯರೂಪಕ್ಕೆ ತರುತ್ತಿದ್ದ ಸುಧಾರಣೆಗಳು, ಬದಲಾವಣೆಗಳು ಒಂದು ಕಡೆಗಾದರೆ ಭಾರತದ ಸಾಮಾಜಿಕ, ಧಾರ್ಮಿಕ ಆಧ್ಯಾತ್ಮಿಕ ಪುನರುತ್ಥಾನದ ಉದ್ದೇಶ ಪ್ರಧಾನವಾಗಿದ್ದ ರಾಜರಾಮ ಮೋಹನ ರಾಯರ ಬ್ರಹ್ಮಸಮಾಜ, ದಯಾನಂದ ಸರಸ್ವತಿಯವರ ಆರ್ಯಸಮಾಜ, ರಾಮಕೃಷ್ಣ, ವಿವೇಕನಂದರ ಆಧ್ಯಾತ್ಮಿಕ ಆಂದೋಲನಗಳು ಇವು ಇನ್ನೊಂದು ಕಡೆಗೆ ಕ್ರಿಯಾಶೀಲವಾಗಿದ್ದವು. ಇಂಥ ವಾಸ್ತವದ ಗ್ರಹಿಕೆಯ ಧೋರಣೆಯ ನಲೆಯಲ್ಲಿ ಮುಖ್ಯವಾಗಿ 'ಇಂದಿರಾಬಾಯಿ' ಮತ್ತು 'ಇಂದಿರಾ' ಕಾದಂಬರಿಗಳನ್ನು ಮುಖ್ಯ ದಾಖಲೆಯಾಗಿ ಗಮನಿಸಬಹುದು. ಇಂದಿರಾಬಾಯಿಯಲ್ಲಿ ಬರುವ ಭಾಸ್ಕರ ಆಧುನಿಕ ಶಿಕ್ಷಣವನ್ನು ತನ್ನದಾಗಿಸಿಕೊಂಡಿದ್ದಾನೆ. ಇದರಿಂದ ಮೂಡಿದ ವೈಚಾರಿಕತೆಯೊಂದಿಗೆ ಸಂಪ್ರದಾಯದ ಮೌಲ್ಯಗಳನ್ನೇ ಪ್ರಶ್ನಿಸುತ್ತಾನೆ. "ಒಬ್ಬ ಮ್ಲೇಚನು ನನ್ನನ್ನು ಮುಟ್ಟಿದರೆ ನನ್ನ ಶರೀರವು ಅಶುದ್ಧಿಯಾಗುವುದೇನು? ಹಾಗಾದರೆ ನಾನು ಮ್ಲೇಚನ ಮೈಯನ್ನು ಮುಟ್ಟಿದರೆ ನನ್ನ ಶರೀರವು ಶುದ್ಧವಾಗುವುದಷ್ಟೇ"[4] ಎಂದು ಹೇಳುವ ಭಾಸ್ಕರನು ಆಧುನಿಕ ಶಿಕ್ಷಣವನ್ನು ಕಲಿತು ಒಟ್ಟು ಸಮಾಜದ ಸುಧಾರಕನಾಗಿ ಕಂಡು ಬರುವುದಿಲ್ಲ, ಅದರ ಬದಲಿಗೆ ತನ್ನ ಸಮುದಾಯದ ಒಳಗಡೆ ಇರುವ ನಂಬಿಕೆ, ನಡವಳಿಕೆಗಳನ್ನು ಪ್ರಶ್ನಿಸುತ್ತಾನೆ. ಇದು ಒಂದು ಮಿತಿ ಎಂದು ಭಾವಿಸುವಂತೆಯೂ ಇಲ್ಲ. ಕಾರಣ ಆ ಹೊತ್ತಿನ ಆಧುನಿಕ ಶಿಕ್ಷಣ ಸಂಪ್ರದಾಯ ಸಮಾಜಕ್ಕೆ ಕೊಟ್ಟ ದಿಕ್ಕು ಏನಿದೆ ಅದು ತನ್ನನ್ನು ತಾನೇ ಪರಿಷ್ಕರಿಸಿಕೊಳ್ಳುವ ರೀತಿಯದು.

ಆಧುನಿಕ ಶಿಕ್ಷಣದ ಬಗೆಗೆ ಮುಖ್ಯವಾಗಿ ಮೇಲ್ವರ್ಗಕ್ಕೆ ವಿರೋಧವಿತ್ತು. ಅದರಿಂದ ಉದ್ಧರಿಸಿಕೊಳ್ಳುವ ಅಗತ್ಯತೆ, ಜ್ಞಾನ ಪಡೆಯುವ ಆಕಾಂಕ್ಷೆ ಇವು ಯಾವೂ ಬೇಕಾಗಿರಲಿಲ್ಲ. ಆಗಲೇ ತಮ್ಮ ಸರ್ವಹಿತ ಉದ್ಧಾರಕ್ಕೆ ಎಲ್ಲಾ ಆಯಾಮಗಳನ್ನು ದಕ್ಕಿಸಿಕೊಂಡುಬಿಟ್ಟಿದ್ದವು. ಆದರೆ ಈ ಎಲ್ಲಾ

ಊನುಗಳನ್ನು ಸರಿಗೊಳಿಸಿಕೊಳ್ಳಬೇಕಾದ್ದುದು ಶೂದ್ರ ಸಮುದಾಯ. ದೇಶಿ ಶಿಕ್ಷಣ ನಮಗೆ ದಕ್ಕದ್ದು ಎಂದು ಯಾವತ್ತೋ ತೀರ್ಮಾನಿಸಿಕೊಂಡಿದ್ದು, ಆಧುನಿಕ ಶಿಕ್ಷಣದ ಕಡೆಗೆ ಕೈಚಾಚಿದ್ದು ಈ ಶಿಕ್ಷಣ ಕೂಡ ಸುಲಭವಾಗಿ ದೊರೆಯಿತು ಎಂಬುದಾಗಿ ಭಾವಿಸುವಂತಿಲ್ಲ ನಮ್ಮ ಚರಿತ್ರೆಯನ್ನು ನೋಡಿದಾಗ ಇದು ತಿಳಿಯುತ್ತದೆ. "ಪುಲೆಯವರು ಐದನೇ ತರಗತಿಯಲ್ಲಿ ಉತೀರ್ಣರಾದಾಗ ಇವರ ಅಂಗಡಿಯಲ್ಲಿ ಕೆಲಸಕ್ಕಿದ್ದ ಬ್ರಾಹ್ಮಣ ಗುಮಾಸ್ತ ಪುಲೆ ವಿದ್ಯಾವಂತನಾದರೆ ತನಗೆ ಕುತ್ತು ಬರಬಹುದೆಂದು ಭಾವಿಸಿ ಹುನ್ನಾರ ಮಾಡಿ ಪುಲೆ ತಂದೆ ಗೋವಿಂದರಾವ್ ಪುಲೆಯವರ ಬಳಿಗೆ ಹೋಗಿ 'ನೋಡಿ ಸ್ವಾಮಿ ನೀವು ಶೂದ್ರ ಜಾತಿಗೆ ಸೇರಿದವರು ವಿದ್ಯಾಭ್ಯಾಸವನ್ನು ಮಾಡುವ ಹಾಗಿಲ್ಲ ಆದರೂ ನಿಮ್ಮ ಮಗ ಓದಿದ್ದಾನೆ. ಈ ವಿಷಯ ನಮ್ಮ ಬ್ರಾಹ್ಮಣ ಜಗದ್ಗುರುಗಳಿಗೆ ತಿಳಿದರೆ ನಿಮಗೆ ಬಹಿಷ್ಕಾರ ಹಾಕಬಹುದು' ಎಂದು ಭಯಹುಟ್ಟಿಸಿ ಪಿತೂರಿಯಿಂದ ಜೋತಿಬಾ ಪುಲೆಯನ್ನು ಶಾಲೆ ಬಿಡಿಸುವಂತೆ ಮಾಡುತ್ತಾನೆ"[5] ಇದು ಶೂದ್ರರಿಗಿದ್ದ ಅಂದಿನ ಇಕ್ಕಟ್ಟಿನ ಸಂದರ್ಭವನ್ನು ತೋರಿಸುತ್ತದೆ. ಶಿಕ್ಷಣವೇ ಶೂದ್ರ ಮತ್ತು ಕೆಳವರ್ಗಗಳಿಗೆ ತಾಕದಂತೆ ನೋಡಿಕೊಂಡಿದ್ದ ಶಕ್ತಿಗಳ ಎದುರು ವಸಾಹತುಶಾಹಿ ತನ್ನ ಶಿಕ್ಷಣವನ್ನು ಸಾರ್ವತ್ರಿಕವಾಗಿಸಿತು. ಇಂಥ ಆಧುನಿಕ ಸಂದರ್ಭ ಉಳಿದ ವರ್ಗಕ್ಕೆ ದಕ್ಕಿಸಿದ ಅವಕಾಶವಿದು.

**ಕೊನೆಟಿಪ್ಪಣಿಗಳು**


1. ಕೋದಂಡರಾಮ ಎಸ್.ಕೆ. (1999). *ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ.* ಗಾಯಿತ್ರಿ ಸ್ಮಾರಕ ಗ್ರಂಥಮಾಲೆ. ಪುಟ. 36
2. ಶಿವರುದ್ರಪ್ಪ, ಜಿ. ಎಸ್. (1982). *ಪ್ರತಿಕ್ರಿಯೆ.* ಪೂರ್ವಗಾಮಿ ಪ್ರಕಾಶನ. ಪುಟ. 22
3. ಅರವಿಂದ ಮಾಲಗತ್ತಿ. (2021). ದಲಿತ ಮಾರ್ಗ. ಪುಸ್ತಕ ಪ್ರಾಧಿಕಾರ. ಪುಟ. 402
4. ಗುಲ್ವಾಡಿವೆಂಕಟರಾಯ. (2018). ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯವು. ಕನ್ನಡ ಪುಸ್ತಕ ಪ್ರಾಧಿಕಾರ. ಪುಟ. 105
5. *ಬಹುಜನ ಸಮಾಜ.* (1961). ಕನ್ನಡ ಸಾಹಿತ್ಯ ಪರಿಷತ್ತು. ಪುಟ. 50